# ಸರ್ಕಾರಿ ಪ್ರೌಢಶಾಲೆ, ಕುರುವಂಕ. ಅರಸೀಕೆರೆ ತಾಲ್ಲೂಕು. ಹಾಸನ ಜಿಲ್ಲೆ

## ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟಂಬರ್ – 2019

**8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ**

**ಸಮಯ : 01–30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **04 × 1 = 04**

1. ಇವುಗಳಲ್ಲಿ ಅವರ್ಗೀಯ ವ್ಯಂಜನಗಳ ಗುಂಪು
   ಎ) ಅಆಇಈ ಬಿ) ತಥದಧನ ಸಿ) ಅಂ,ಅಃ ಡಿ) ಯರಲವ
2. ಇವುಗಳಲ್ಲಿ ಆಗಮಸಂಧಿಗೆ ಉದಾಹರಣೆ
   ಎ) ಮಿಗಿಲಾಗಿ ಬಿ) ಹೆಸರಾಗಿದೆ ಸಿ) ಮೈದೊಳೆ ಡಿ) ದಿನವೆಲ್ಲ
3. ಇವುಗಳಲ್ಲಿ ಕರ್ಮಧಾರಯ ಸಮಾಸಕ್ಕೆ ಉದಾಹರಣೆ
   ಎ) ಹೆಮ್ಮರ ಬಿ) ನಡುಮನೆ ಸಿ) ರಾಜಪುತ್ರಿ ಡಿ) ನಾಲ್ಮೊಗ
4. ಗುರುಗಳು ಮಕ್ಕಳಿಗೆ ಪುಸ್ತಕವನ್ನು ತರಲು ಹೇಳಿದರು. ಈ ವಾಕ್ಯದಲಿ ಚತುರ್ಥಿ ವಿಭಕ್ತಿ ಹೊಂದಿರುವ ಪದ
   ಎ) ಗುರುಗಳು ಬಿ) ಮಕ್ಕಳಿಗೆ ಸಿ) ಪುಸ್ತಕವನ್ನು ಡಿ) ತರಲು

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **06 × 1 = 06**

5. ನವೀನ ಶಿಕ್ಷಣದ ಉದ್ದೇಶವೇನಾಗಿತ್ತು?
6. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?
7. ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?
8. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?
9. ಹುಣ್ಣಿಮೆಯ ಕಣ್ಣು ಎಲ್ಲಿ ತೆರೆದಿದೆ?
10. ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **5 ×2 = 10**

11. ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.
12. ನಾಗರಿಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?
13. ತಾಯಿ ತನ್ನ ಮಗುವಿನ ಆರೈಕೆಯನ್ನು ಹೇಗೆ ಮಾಡುತ್ತಾಳೆ ವಿವರಿಸಿ.
14. ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ? ವಿವರಿಸಿ.
15. ಹೊಸನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2 × 2 = 04**

16. "ಮೋಟರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು"
17. "ಬಾಳುವರು ಗಂಧದೊಲು ಜೀವ ತೆಯ್ದು!"

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿಗಳನ್ನು ಪರಿಚಯಿಸಿ, ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1×2=2**

18. ಹಿರೇಮಲ್ಲೂರು ಈಶ್ವರನ್

Ramesh.K. GHS Kuruvanka. Arsikere Tq Hassan Dt. Mob 9481117477

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 × 2 = 2**

19. ಜೈನರಾದ ಪೂಜ್ಯಪಾದ ಕೊಂಡ ಕುಂದವರ್ಯರ

______________________________

________________

________________

________________

________________

ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

**ಕೊಟ್ಟಿರುವ ಪದ್ಯಭಾಗವನ್ನು ಓದಿ 3–4 ವಾಕ್ಯಗಳಲ್ಲಿ ಸಾರಾಂಶ ಬರೆಯಿರಿ:** **1 × 2 = 2**

20. ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡಬಳ್ಳಿ ಚಿತ್ತಾರ
ಮರೆತೇಬಿಟ್ಟಿಹನು ಮಣ್ಣ ಸೊಗಡ.

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 × 4 = 4**

21. ಡಿವಿಜಿಯವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.

**ಅಥವಾ**

ಡಿವಿಜಿಯವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಕೊಟ್ಟಿರುವ ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:** **1 + 1 = 2**

22. ಕನ್ನಡನಾಡು ಏಕೀಕರಣಗೊಳ್ಳಲು ಮತ್ತು ಬ್ರಿಟಿಷರ ವಿರುದ್ಧ ಹೋರಾಡಲು ಕನ್ನಡಿಗರಿಗೆ ಪ್ರೇರಣೆಯಾದ ಘಟನೆ ಇದು. ಬ್ರಿಟಿಷರದ್ದು ಒಡೆದು ಆಳುವ ನೀತಿ, ಅದರಂತೆಯೇ 1905ರ ಆಗಸ್ಟ್ 16ರಂದು ಬ್ರಿಟಿಷ್ ಸರ್ಕಾರ ಬಂಗಾಳ ರಾಜ್ಯ ವಿಭಜನೆಗೆ ಮುಂದಾಯಿತು. ಇದನ್ನು ಪ್ರತಿಭಟಿಸಿದ ಬಂಗಾಳಿಗರು 'ವಂಗಭಂಗ' ಎನ್ನುವ ಬೃಹತ್ತಾದ ಚಳುವಳಿಯನ್ನು ನಡೆಸಿದರು. ಇದಕ್ಕೆ ಮಣಿದ ಸರ್ಕಾರ 1911ರಲ್ಲಿ ಪುನಃ ಬಂಗಾಳವನ್ನು ಒಂದು ಮಾಡಿತು. ಇದರಿಂದ ಪ್ರೇರಿತರಾಗಿ ಕನ್ನಡದ ಕಟ್ಟಾಳುಗಳು ಕನ್ನಡಿಗರನ್ನು ಒಂದು ಮಾಡುವ ಹೋರಾಟವನ್ನು ಪ್ರಾರಂಭಿಸಿದರು.

ಪ್ರಶ್ನೆಗಳು:

ಅ) ಬಂಗಾಳಿಗರು ಬ್ರಿಟಿಷರನ್ನು ವಿರೋಧಿಸಲು ಕಾರಣವೇನು?

ಆ) ಕನ್ನಡಿಗರು ವಂಗಭಂಗ ಚಳುವಳಿಯಿಂದ ಪ್ರೇರಿತರಾಗಿ ಮಾಡಿದ ಕೆಸಲವೇನು?

23. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಕುರುವಂಕದ ವಿದ್ಯಾರ್ಥಿ ರಮೇಶ್/ರಂಜಿತ ಎಂದು ಭಾವಿಸಿಕೊಂಡು, ನಿಮ್ಮ ಅನಾರೋಗ್ಯದ ಕಾರಣ ನೀಡಿ ಎರಡು ದಿನಗಳ ರಜೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ರಜೆ ಪತ್ರ ಬರೆಯಿರಿ. **1 × 4 = 4**

**ಅಥವಾ**

ನಿಮ್ಮನ್ನು ಸುಭಾಷ್‌ಚಂದ್ರ ಬೋಸ್ ಪ್ರೌಢಶಾಲೆ, ಬಾಗೇಶಪುರದ ವಿದ್ಯಾರ್ಥಿ ಮೋಹನ್/ಮೋಹಿನಿ ಎಂದು ಭಾವಿಸಿಕೊಂಡು, ಬೆಂಗಳೂರಿನಲ್ಲಿ ವಾಸವಾಗಿರುವ ನಿಮ್ಮ ತಾಯಿಯವರಿಗೆ ಎಂಬುವವರಿಗೆ ನಿನಗೆ ಕ್ರೀಡಾಕೂಟದಲ್ಲಿ ಬಹುಮಾನ ಬಂದ ಬಗ್ಗೆ ಪತ್ರ ಬರೆಯಿರಿ.

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟಂಬರ್ – 2019

## 8 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

### ಮೌಲ್ಯಮಾಪನ ಸೂಚಿ (ಮಾದರಿ ಉತ್ತರಗಳು)

**ಸಮಯ : 1.30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **04 × 1 = 04**

1. ಇವುಗಳಲ್ಲಿ ಅವರ್ಗೀಯ ವ್ಯಂಜನಗಳ ಗುಂಪು

   ಎ) ಅಆಇಈ ಬಿ) ತಥದಧನ ಸಿ) ಅಂ,ಅಃ ಡಿ) ಯರಲವ

   ಉತ್ತರ: ಡಿ) ಯರಲವ
2. ಇವುಗಳಲ್ಲಿ ಆಗಮಸಂಧಿಗೆ ಉದಾಹರಣೆ

   ಎ) ಮಿಗಿಲಾಗಿ ಬಿ) ಹೆಸರಾಗಿದೆ ಸಿ) ದಿನವೆಲ್ಲ ಡಿ) ಮೈದೊಳೆ

   ಉತ್ತರ: ಸಿ) ದಿನವೆಲ್ಲ
3. ಇವುಗಳಲ್ಲಿ ಕರ್ಮಧಾರಯ ಸಮಾಸಕ್ಕೆ ಉದಾಹರಣೆ

   ಎ) ಹೆಮ್ಮರ ಬಿ) ನಡುಮನೆ ಸಿ) ರಾಜಪುತ್ರಿ ಡಿ) ನಾಲ್ಮೊಗ

   ಉತ್ತರ: ಎ) ಹೆಮ್ಮರ
4. ಗುರುಗಳು ಮಕ್ಕಳಿಗೆ ಪುಸ್ತಕವನ್ನು ತರಲು ಹೇಳಿದರು. ಈ ವಾಕ್ಯದಲಿ ಚತುರ್ಥಿ ವಿಭಕ್ತಿ ಹೊಂದಿರುವ ಪದ

   ಎ) ಗುರುಗಳು ಬಿ) ಮಕ್ಕಳಿಗೆ ಸಿ) ಪುಸ್ತಕವನ್ನು ಡಿ) ತರಲು

   ಉತ್ತರ: ಬಿ) ಮಕ್ಕಳಿಗೆ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **06 × 1 = 06**

5. ನವೀನ ಶಿಕ್ಷಣದ ಉದ್ದೇಶವೇನಾಗಿತ್ತು?

   ಉತ್ತರ: ನವೀನ ಶಿಕ್ಷಣವು ವಿದ್ಯಾರ್ಥಿಗಳ ಹಸ್ತಕೌಶಲವನ್ನು, ದೇಹಶ್ರಮದಲಲಿ ಗೌರವ–ಭಾವವನ್ನು ಉಂಟುಮಾಡುವ ಉದ್ದೇಶವನ್ನು ಹೊಂದಿತ್ತು.
6. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?

   ಉತ್ತರ: ಪ್ರತಿಯೊಬ್ಬರೂ ಪ್ರತಿಯೊಬ್ಬರೂ ನೀರನ್ನು ಕೊಂಡು ಕುಡಿಯುವಂತೆ ಮಾಡುವ ಹುನ್ನಾರ ಭಾರತದಲ್ಲಿ ಇತ್ತೀಚೆಗೆ ನಡೆದಿದೆ.
7. ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?

   ಉತ್ತರ: ವಿಷ್ಣುವರ್ಧನನು ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಸೋಲಿಸಿ ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಜಯನಾರಾಯಣನ ಗುಡಿಕಟ್ಟಿದನು.
8. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?

   ಉತ್ತರ: ಕನ್ನಡ ತಾಯಿಯ ಹಾಡನ್ನು **ಹೊಸತು ಕಿನ್ನರಿಯಲಿ** ಉಕ್ಕಿಸಬೇಕು.
9. ಹುಣ್ಣಿಮೆಯ ಕಣ್ಣು ಎಲ್ಲಿ ತೆರೆದಿದೆ?

   ಉತ್ತರ: ಹುಣ್ಣಿಮೆಯ ಕಣ್ಣು ನೀರು ತುಂಬಿದ ಕಪ್ಪು ಮೋಡಗಳ ನಡುವೆ ತೆರೆದಿದೆ.
10. ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ?

    ಉತ್ತರ: ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಮೀನಿಗೆ ಸಿಗುತ್ತದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **5 × 2 = 10**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

11. ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.

Ramesh.K. GHS Kuruvanka. Arsikere Tq Hassan Dt. Mob 9481117477

ಉತ್ತರ: ಸಾಹೇಬ್ ಬಹಾದ್ದೂರ್ ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ; ದೇವಸ್ಥಾನವನ್ನೂ ಕಟ್ಟಿಸಿದ್ದರು. ಅವರನ್ನು ಮಗ್ಗದ ಸಾಹೇಬರೆಂದೇ ಕರೆಯುತ್ತಿದ್ದರು.

12. ನಾಗರಿಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?
ಉತ್ತರ: 'ಮದರ್ಸ್‌ಡೇ,' 'ಫಾದರ್ಸ್ ಡೇ', 'ವ್ಯಾಲೆಂಟೈನ್ ಡೇ' ಆಚರಿಸುವುದು ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿವೆ. ಈ ಹೊಸ ಹೊಸ ದಿನಗಳೆಲ್ಲ ಉಕ್ಕಿದ ಪ್ರೀತಿಯ ದ್ಯೋತಕವಲ್ಲ. 'ಗಿಫ್ಟ್', 'ಗ್ರೀಟಿಂಗ್ ಕಾರ್ಡ್' ಮಾರುವ ಹೊಸ ಹುನ್ನಾರಗಳೆಂಬುದು ಎಲ್ಲರಿಗೂ ತಿಳಿದಿದೆ.

13. ತಾಯಿ ತನ್ನ ಮಗುವಿನ ಆರೈಕೆಯನ್ನು ಹೇಗೆ ಮಾಡುತ್ತಾಳೆ ವಿವರಿಸಿ.
ಉತ್ತರ: ಮಧ್ಯರಾತ್ರಿಯ ವೇಳೆ ತಾಯಿಯ ಪಕ್ಕದಲ್ಲಿ ಮಲಗಿರುವ ಮಗು ನಿದ್ದೆಗಣ್ಣಿನಲ್ಲಿ ಹೊದಿಕೆಯನ್ನು ಕಿತ್ತೆಸೆಯುತ್ತದೆ; ಕಾಲಿನಿಂದ ಒದೆದು ಬರಿ ಮೈಯಲ್ಲಿ ಮಲಗುತ್ತದೆ. ಆಗ ತಾಯಿ ತಾನು ನಿದ್ದೆ ಮಾಡುತ್ತಿದ್ದರೂ ತನ್ನ ಕೈಯಿಂದ ಹೊದಿಕೆಯನ್ನು ಮತ್ತೆ ಮತ್ತೆ ಸರಿಪಡಿಸಿ ಮಗುವಿನ ಆರೈಕೆ ಮಾಡುತ್ತಾಳೆ.

14. ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ? ವಿವರಿಸಿ.
ಉತ್ತರ: ಗೆಳೆಯರ ಮನಸ್ಸಿನಲ್ಲಿ ವಂಚನೆ, ಚಂಚಲತೆ, ಮೇಲು ಕೀಳುಗಳೆಂಬ ಭೇದ, ಅಹಂಕಾರವಿಲ್ಲ. ದ್ವೇಷಭಾವನೆ, ಸಣ್ಣತನ, ಸಂಕೋಚ ಮುಂತಾದ ಭಾವನೆಗಳಿರುವುದಿಲ್ಲ. ಗೆಳೆತನದಲ್ಲಿ ಮನವು ಬಾನಿನಂತೆ ವಿಶಾಲವಾಗಿದ್ದು ಎದೆ ತಿಳಿಯಾದ ಕೊಳದಂತೆ ಪ್ರಶಾಂತವಾಗಿರುವತ್ತದೆ. ಹಾಗೂ ಭಾವನೆಯು ಸ್ಫಟಿಕದಂತೆ, ಬೆಳದಿಂಗಳಿನಂತೆ ಪರಿಶುದ್ಧವಾಗಿರುತ್ತದೆ.

15. ಹೊಸನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?
ಉತ್ತರ: ಹೊಸನಾಡೊಂದನ್ನು ಕಟ್ಟಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ, "ಎಲ್ಲರೂ ತೊಡುಕುಗಳ ಒಡಕುಗಳ ಬಿಡಿಸಿಕೊಂಡು ಹೊರಡುವೆವು. ಎಲ್ಲರೂ ಒಗ್ಗಟ್ಟಾಗಿ ಹೊಸ ನಾಡನ್ನು ಕಟ್ಟುವೆವು. ವೀರ ಯುವಜನದ ಉತ್ಸಾಹದ ಹಾರಾಟಕ್ಕೆ ಆಕಾಶವೇ ಗಡಿ, ಅದಕೆ ತಡೆಯಾಗಲು ಎಂದಿಗೂ ಬಿಡುವುದಿಲ್ಲ. ಯಾರಾದರೂ ತಡೆಯುವವರು, ಹೊಡೆಯುವವರು, ಕಟ್ಟಿದ್ದನ್ನು ಬಗೆಯುವವರು, ತಡೆವವರು ಬನ್ನಿರೋ, ಹೊಡೆವವರು ಬನ್ನಿರೋ, ಕೆಡೆನುಡಿವ ಕೆಡೆಬಗೆವ ಕೆಡಕು ಜನರೇ ಬನ್ನಿ!" ಎಂದು ಹೇಳಿದ್ದಾರೆ.

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2 × 2 = 4**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಒಟ್ಟು** | **2ಅಂಕಗಳು** |

16. "ಮೋಟರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು"
**ಉತ್ತರ:** ಆಯ್ಕೆ: ಹಿರೇಮಲ್ಲೂರು ಈಶ್ವರನ್ ಅವರ 'ಕವಿಕಂಡ ನಾಡು' ಕೃತಿಯಿಂದ ತೆಗೆದುಕೊಳ್ಳಲಾದ 'ತಲಕಾಡಿನ ವೈಭವ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಲೇಖಕರು ಅರ್ಕೇಶ್ವರನ ದರ್ಶನವೊಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ಕೊರಕಲು ದಾರಿಯಲ್ಲಿ ಹೋಗುತ್ತಿದ್ದಾಗ ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರ. ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ. ಅರ್ಕೇಶ್ವರ ದೇವಾಲಯ ಕಾಣದೆ ಹೋದರೆ ಮನಸ್ಸಿನಲ್ಲಿ ಕೊನೆಯವರೆಗೂ ಅತೃಪ್ತಿ ಉಳಿಯುತ್ತದೆ. ಎಂದು ಲೇಖಕರ ಅಭಿಪ್ರಾಯವಾಗಿತ್ತು.
ಸ್ವಾರಸ್ಯ: ಏನೇ ಆದರೂ ಸಂಕಲ್ಪದಂತೆ ಪ್ರವಾಸ ಪೂರ್ಣಗೊಳಿಸಬೇಕೆಂಬ ಲೇಖಕರ ಹಂಬಲ ಇಲ್ಲಿ ಸ್ವಾರಸ್ಯಪೂರ್ಣವಾಗಿದೆ."
ಉತ್ತರ:

17. "ಬಾಳುವರು ಗಂಧದೊಲು ಜೀವ ತೆಯ್ದು!"
ಉತ್ತರ: ಆಯ್ಕೆ: ಈ ವಾಕ್ಯವನ್ನು ಚೆನ್ನವೀರ ಕಣವಿ ಅವರು ಬರೆದಿರುವ 'ಆಕಾಶಬುಟ್ಟಿ' ಕವನ ಸಂಕಲನದಿಂದ ಆರಿಸಿಕೊಳ್ಳಲಾದ 'ಗೆಳೆತನ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಗೆಳೆಯರು ಕಷ್ಟ-ಸುಖಗಳಲ್ಲಿ ಹೇಗೆ ಹೆಗಲಿಗೆ ಹೆಗಲುಕೊಟ್ಟು ಭಾಗಿಯಾಗುತ್ತಾರೆ. ಗಂಧವು ತೇದಾಗ ಕಂಪು ನೀಡುವಂತೆ ಗೆಳೆಯರು ಹೇಗೆ ತ್ಯಾಗ ಮಾಡುತ್ತಾರೆ ಎಂಬುದನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಗೆಳೆಯರ ತ್ಯಾಗ ಮನೋಭಾವನೆಯನ್ನು ಗಂಧ ತೇಯುವುದಕ್ಕೆ ಹೋಲಿಸಿರುವುದು ಇಲ್ಲಿನ ಸ್ವಾರಸ್ಯ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿಗಳನ್ನು ಪರಿಚಯಿಸಿ, ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1×2=2**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ಒಟ್ಟು** | **2 ಅಂಕಗಳು** |

18. ಹಿರೇಮಲ್ಲೂರು ಈಶ್ವರನ್

ಉತ್ತರ: ರೇಮಲ್ಲೂರು ಈಶ್ವರನ್ ಅವರು 1922ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಹಿರೇಮಲ್ಲೂರಿನಲ್ಲಿ ಜನಿಸಿದರು. ಇವರ ಕೃತಿಗಳು ಕವಿ ಕಂಡ ನಾಡು, ವಿಷನಿಮಿಷಗಳು, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕತೆ, ಹಾಲಾಹಲ, ರಾಜಾರಾಣಿ ದೇಖೋ, ಶಿವನ ಬುಟ್ಟಿ, ತಾಯಿನೋಟ ಮೊದಲಾದವು. ಇವರ ಹರಿಹರನ ಕೃತಿಗಳು ಒಂದು ಸಂಖ್ಯಾನಿರ್ಣಯ ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರಕಿದೆ.

**ಪದ್ಯಭಾಗವನ್ನು ಪೂರ್ಣಗೊಳಿಸಿರಿ.(ಪ್ರತಿ ಸಾಲಿಗೆ 1/2 ಅಂಕ) 1 × 2 = 2**

19. ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ
ಪುರಂದರ ವರೇಣ್ಯರ
ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.**

**1 × 2 = 2**

20. ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡಬಳ್ಳಿ ಚಿತ್ತಾರ
ಮರೆತೇಬಿಟ್ಟಿಹನು ಮಣ್ಣ ಸೊಗಡ.

ಈ ಪದ್ಯಭಾಗವನ್ನು ಬಿ.ಟಿ.ಲಲಿತಾನಾಯಕ್‌ರವರ ಬಿದಿರುಮೆಳೆ ಕಂಟಿಯಲಿ ಕೃತಿಯಿಂದ ಆರಿಸಿರುವ ಭರವಸೆ ಪದ್ಯಭಾಗದಿಂದ ಆರಿಸಿಕೊಂಡಿದೆ.

ಮನುಷ್ಯನು ಪ್ರಕೃತಿಯ ಶ್ರೀಮಂತ ಮುಡಿಗೆ ಕೊಡಲಿ ಹಾಕಿ ಸ್ವಾರ್ಥದಿಂದ ಮುಳುಗಿ ಇಡೀ ಪ್ರಕೃತಿಯನ್ನು ನಾಶ ಮಾಡುತ್ತಿದ್ದಾನೆ. ಪ್ರಕೃತಿಯ ಸೌಂದರ್ಯವನ್ನು ತನ್ನ ಮನೆಯ ಗೋಡೆಗಳ ಮೇಲೆ ಚಿತ್ರದಲ್ಲಿ ಬಿಡಿಸಿಕೊಂಡು ಸಂತೋಷಪಡುತ್ತಿದ್ದಾನೆ. ಮಣ್ಣಿನ ಕಂಪನ್ನು ಪೂರ್ತಿಯಾಗಿ ಮರೆತೇಬಿಟ್ಟಿದ್ದಾನೆ. ಎಂದು ಮನುಷ್ಯ ಇಂದು ಪ್ರಕೃತಿ ಸಂರಕ್ಷಣೆ ಮಾಡಬೇಕು ಎಂಬ ಮೌಲ್ಯವನ್ನು ಈ ಪದ್ಯ ಸಾರುತ್ತಿದೆ.

| | |
|---|---|
| **ಪದ್ಯದ ಆಯ್ಕೆ ಮತ್ತು ಸಂದರ್ಭದ ವಿವರಣೆ** | **1 ಅಂಕ** |
| **ಸಾರಾಂಶ** | **1 ಅಂಕಗಳು** |
| **ಒಟ್ಟು** | **2 ಅಂಕಗಳು** |

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 × 4 = 4**

21. ಡಿವಿಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.

ಉತ್ತರ: ಡಿವಿಜಿ ಅವರೇನು ದೊಡ್ಡದೊಡ್ಡ ಡಿಗ್ರಿ ಪಡೆದವರಲ್ಲ, ಎಸ್.ಎಸ್.ಎಲ್.ಸಿ. ಕೂಡ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನದಿನದ ಅಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂಥ ಕೆಲಸ. ಸರ್ಕಾರಿ

ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತೂ ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು. ಎಷ್ಟೇ ಬಡತನದಲ್ಲಿದ್ದರೂ ಅವರು ಎಂದಿಗೂ ಹಣಕ್ಕಾಗಿ ಆಸೆಪಡಲಿಲ್ಲ. ಇಂಥಾ ಸತ್ವಶಾಲಿ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಕೇವಲ ಅವರ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಆರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ, ಮಿರ್ಜಾರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.
ಡಿವಿಜಿ ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆಯುಳ್ಳವರಾಗಿದ್ದರು. ಅವರನ್ನು 'ಮಹಾಧೀಮಂತ' ಎಂಬ ಮಾತಿನಿಂದ ವರ್ಣಿಸಿದರೆ ಸರಿಯಾಗುತ್ತದೆ.

**ಅಥವಾ**

ಡಿವಿಜಿ ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

ಉತ್ತರ: ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಆರತಿ ಅಕ್ಷತೆಯ ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಾರೆ. ಆಗ ಡಿವಿಜಿ ಅವರು ಕೇಳಿದರು... ಡಿವಿಜಿ: "ನೀನು ಉತ್ಸವಕ್ಕೆ ಹೋಗುವುದಿಲ್ಲವೇ? " ಶ್ರೀಮತಿ: 'ಇಲ್ಲ' 'ಯಾಕೆ'? 'ಮಕ್ಕಳನ್ನು ಕಳಿಸಿದ್ದೇನಲ್ಲ'
ಡಿವಿಜಿ: "ಅದು ಸರಿ ನೀನೂ ಹೋಗಬೇಕಷ್ಟೆ. ಅವರು ನಮಗೆ ಬಹಳ ಬೇಕಾದವರು ನೀನು ಹೋಗದಿದ್ದರೆ ಬೇಸರಪಡುವುದಿಲ್ಲವೇ?" ಶ್ರೀಮತಿ: "ಮನೆಯಲ್ಲಿ ಯಾರಾದರೂ ಇರಬೇಕಲ್ಲ" ಡಿವಿಜಿ: "ನಾನು ಇರುತ್ತೇನೆ. ನೀನು ಹೋಗಿ ಬಾ."
ಶ್ರೀಮತಿ: "ನಾನು ಹೇಳಬಾರದೆಂದಿದ್ದೆ. ನೀವು ಪಟ್ಟುಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೇ ನಿಮ್ಮ ಮರ್ಯಾದೆಗೆ ಊನಬಾರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ?" ಎಂದು ಹೇಳಿದರು.

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **4 ಅಂಕಗಳು** |

**ಕೊಟ್ಟಿರುವ ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ: 1 + 1 = 2**

22. ಕನ್ನಡನಾಡು ಏಕೀಕರಣಗೊಳ್ಳಲು ಮತ್ತು ಬ್ರಿಟಿಷರ ವಿರುದ್ಧ ಹೋರಾಡಲು ಕನ್ನಡಿಗರಿಗೆ ಪ್ರೇರಣೆಯಾದ ಘಟನೆ ಇದು. ಬ್ರಿಟಿಷರದ್ದು ಒಡೆದು ಆಳುವ ನೀತಿ, ಅದರಂತೆಯೇ 1905ರ ಆಗಸ್ಟ್ 16ರಂದು ಬ್ರಿಟಿಷ್ ಸರ್ಕಾರ ಬಂಗಾಳ ರಾಜ್ಯ ವಿಭಜನೆಗೆ ಮುಂದಾಯಿತು. ಇದನ್ನು ಪ್ರತಿಭಟಿಸಿದ ಬಂಗಾಳಿಗರು 'ವಂಗಭಂಗ' ಎನ್ನುವ ಬೃಹತ್ತಾದ ಚಳುವಳಿಯನ್ನು ನಡೆಸಿದರು. ಇದಕ್ಕೆ ಮಣಿದ ಸರ್ಕಾರ 1911ರಲ್ಲಿ ಪುನಃ ಬಂಗಾಳವನ್ನು ಒಂದು ಮಾಡಿತು. ಇದರಿಂದ ಪ್ರೇರಿತರಾಗಿ ಕನ್ನಡದ ಕಟ್ಟಾಳುಗಳು ಕನ್ನಡಿಗರನ್ನು ಒಂದು ಮಾಡುವ ಹೋರಾಟವನ್ನು ಪ್ರಾರಂಭಿಸಿದರು.

ಪ್ರಶ್ನೆಗಳು:

ಅ) ಬಂಗಾಳಿಗರು ಬ್ರಿಟಿಷರನ್ನು ವಿರೋಧಿಸಲು ಕಾರಣವೇನು?

ಉತ್ತರ: ಬ್ರಿಟಿಷರು ಬಂಗಾಳ ರಾಜ್ಯವನ್ನು ವಿಭಜಿಸಲು ಮುಂದಾದರು, ಇದನ್ನು ಬಂಗಾಳಿಗರು ವಿರೋಧಿಸಿದರು.

ಆ) ಕನ್ನಡಿಗರು ವಂಗಭಂಗ ಚಳುವಳಿಯಿಂದ ಪ್ರೇರಿತರಾಗಿ ಮಾಡಿದ ಕೆಸಲವೇನು?

ಉತ್ತರ: ಕನ್ನಡಿಗರು ವಂಗಭಂಗ ಚಳುವಳಿಯಿಂದ ಪ್ರೇರಿತರಾಗಿ ಕನ್ನಡದ ಕಟ್ಟಾಳುಗಳು ಕನ್ನಡಿಗರನ್ನು ಒಂದು ಮಾಡುವ ಹೋರಾಟವನ್ನು ಪ್ರಾರಂಭಿಸಿದರು.

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಒಟ್ಟು** | **2 ಅಂಕಗಳು** |

23. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಕುರುವಂಕದ ವಿದ್ಯಾರ್ಥಿ ರಮೇಶ್/ರಂಜಿತ ಎಂದು ಭಾವಿಸಿಕೊಂಡು, ನಿಮ್ಮ ಅನಾರೋಗ್ಯದ ಕಾರಣ ನೀಡಿ ಎರಡು ದಿನಗಳ ರಜೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ರಜೆ ಪತ್ರ ಬರೆಯಿರಿ. **1 × 4 = 4**

**ಅಥವಾ**

ನಿಮ್ಮನ್ನು ಸುಭಾಷ್‌ಚಂದ್ರ ಬೋಸ್ ಪ್ರೌಢಶಾಲೆ, ಬಾಗೇಶಪುರದ ವಿದ್ಯಾರ್ಥಿ ಮೋಹನ್/ಮೋಹಿನಿ ಎಂದು ಭಾವಿಸಿಕೊಂಡು, ಬೆಂಗಳೂರಿನಲ್ಲಿ ವಾಸವಾಗಿರುವ ನಿಮ್ಮ ತಾಯಿಯವರಿಗೆ ಎಂಬುವವರಿಗೆ ನಿನಗೆ ಕ್ರೀಡಾಕೂಟದಲ್ಲಿ ಬಹುಮಾನ ಬಂದ ಬಗ್ಗೆ ಪತ್ರ ಬರೆಯಿರಿ.

| | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **1 ಅಂಕಗಳು** |
| **ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **4 ಅಂಕಗಳು** |